ದಿನಾಂಕ 06.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ- ಶ್ರಿ ಎಂ ಜಿ ಆರ ವಕೀಲರಿಂದಃ-</u>**

ಅರ್ಜಿದಾರರ ಜಾಗವನ್ನು ಬೇರೆಯವರು ಬರೆಸಿಕೊಂಡಿದ್ದಾರೆ ಎಂದು ಹೇಳಿ ಈಪ್ರಕರಣವನ್ನು ದಾಖಲಿಸಲಾಗಿರುತ್ತದೆ. ನಮ್ಮ ಮನೆಯಿಂದ ಅರ್ಜಿದಾರರ ಮನೆಗೆ 1 ಕಿ.ಮೀ ಅಂತರವಿದೆ. ಅರ್ಜಿದಾರರ ವಿರುದ್ದ ಕೊಲೆ ಪ್ರಕರಣ ದಾಖಲಾಗಿದ್ದ ವಿಚಾರ ಹಾಗೂ ಅವರು ಜೈಲಿನಲ್ಲಿ ಇದ್ದ ವಿಚಾರ ನನಗೆ ಗೊತ್ತಿಲ್ಲ. ಪುಟ್ಟಪ್ಪ ಅರ್ಜಿದಾರರ ಅತ್ತೆಯ ಗಂಡ. ಅರ್ಜಿದಾರರ ತಂದೆ ಮೃತರಾಗುವವರೆಗೆ ಅರ್ಜಿದಾರರೊಟ್ಟಿಗೆ ವಾಸವಾಗಿದ್ದರು. ಅರ್ಜಿದಾರರು ಯಾವ ಎಸ್ಟೇಟ್‌ನಲ್ಲಿ ಕೆಲಸ ಮಾಡುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. 1998 ರಲ್ಲಿ ಅರ್ಜಿದಾರರು ಚಿಕ್ಕಮಂಗಳೂರಿನ ಎಸ್ಟೇಟ್ ನಲ್ಲಿ ಇದ್ದರು. ನನಗೆ ಈ ಕೇಸಿನ ಬಗ್ಗೆ ಹಾಗೂ ಅರ್ಜಿದಾರರು ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ-</u> ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.